ಕರ್ನಾಟಕ ಸರ್ಕಾರ

ಸಂ.ಎಸ್‌ಡಬ್ಲ್ಯೂಎಲ್:295:ಎಸ್‌ಪಿಡಿ:87.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ, 3ನೇ ಹಂತ,
2ನೇ ಮಹಡಿ, ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು. ದಿನಾಂಕ:6-8-1988.

## ಸುತ್ತೋಲೆ

ವಿಷಯ: 'ಕೊರವ' (KORAVA) ಮತ್ತು 'ಕೊರವರ್' (KORAVAR) ಜಾತಿಗಳಿಗೆ 'ಕೊರಮ' (KORAMA) (ಪರಿಶಿಷ್ಟ ಜಾತಿ) ಎಂದು ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಪಷ್ಟೀಕರಣ.

-oOo-

ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಆದೇಶ (ತಿದ್ದುಪಡಿ) 1976 ರ ಕಾಯಿದೆಯನ್ವಯ ಕ್ಷೇತ್ರ ನಿಬಂಧನೆಗಳನ್ನು ತೆಗೆದ ನಂತರ 'ಕೊರಮ' (KORAMA) ಜಾತಿಗೆ ಪರಿಶಿಷ್ಟ ಜಾತಿ ಎಂದು ಕರ್ನಾಟಕ ರಾಜ್ಯದಲ್ಲಿ ಪರಿಗಣಿಸಿದೆ. (ಕಾಯಿದೆಯಲ್ಲಿ ನಿರ್ದಿಷ್ಟವಾಗಿ ನಮೂದಿಸಿರುವ ಕೆಲವು ಪ್ರದೇಶಗಳನ್ನು ಬಿಟ್ಟು).

ದಿನಾಂಕ: 5-10-1979 ರ ಪತ್ರಾಂಕ ಬಿಸಿ 12 016:37:76 ಎಸ್.ಸಿ.ಟಿ. 5 ರ ಪತ್ರದಲ್ಲಿ ಭಾರತ ಸರ್ಕಾರವು ಕೆಲವು ಸಮ ಪದಗಳಾದ "ಕೊರವ" (KORAVA) "ಕೊರವರ್" (KORAVAR) ಜಾತಿಗಳನ್ನು 'ಕೊರಮ' (KORAMA) ಜಾತಿಯ ಪರ್ಯಾಯ ಪದವೆಂದು ಪರಿಗಣಿಸಿದೆ, ಅದರಂತೆ, ಕರ್ನಾಟಕ ಸರ್ಕಾರವು ದಿನಾಂಕ: 27-3-1980 ರ ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಎಲ್ 285 ಎಸ್‌ಪಿಡಿ 78 ರಲ್ಲಿ ಸ್ಪಷ್ಟವಾಗಿ ಇಂತಹ ಜನಾಂಗಗಳಿಗೆ ಸೇರಿದವರಿಗೆ "ಕೊರಮ" (KORAMA) ಎಂದು ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ಕೊಡಿಸಿದರೆ ಮಾತ್ರ ಬೆಲೆ ಇರುತ್ತದೆ ಎಂದು ತಿಳಿಸಿರುತ್ತದೆ. ಕಾರಣ "ಕೊರವ" (KORAVA) "ಕೊರವರ್" (KORAVAR) ಜನಾಂಗದವರು ಅಧ್ಯಕ್ಷೀಯ ಆದೇಶದಲ್ಲಿ ಸೇರಿರುವುದಿಲ್ಲ.

"ಕೊರವ" (KORAVA) "ಕೊರವರ್" (KORAVAR) ಜಾತಿಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ "ಕೊರಮ" (KORAMA) ಜಾತಿಯ ಪರ್ಯಾಯ ಪದಗಳೆಂಬ ವಿಚಾರದಲ್ಲಿ ಕೆಲವು ತಹಸೀಲ್ದಾರರುಗಳಿಗೆ ಅನುಮಾನ ಉಂಟಾಗಿದ್ದು ಸದರಿ ಜನಾಂಗಕ್ಕೆ ಜಾತಿ ಪ್ರಮಾಣ ಪತ್ರ ಕೊಡುವಲ್ಲಿ ತೊಡಕುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರವುಳ್ಳ ತಹಸೀಲ್ದಾರರು ದಿನಾಂಕ: 27-3-80 ರ ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಎಲ್ 285 ಎಸ್‌ಪಿಡಿ 78 ರಲ್ಲಿರುವ ಸಲಹೆಗಳನ್ನು ಬಹಳ ಎಚ್ಚರಿಕೆಯಿಂದ ಅನುಸರಿಸಬೇಕು ಮತ್ತು "ಕೊರವ" (KORAVA) "ಕೊರವರ್" (KORAVAR) ಜಾತಿಗೆ ಸೇರಿದ ಜನಾಂಗದವರಿಗೆ ಅಧ್ಯಕ್ಷೀಯ ಆದೇಶದನ್ವಯ "ಕೊರಮ" (KORAMA) ಪರಿಶಿಷ್ಟ ಜಾತಿ ಎಂದು ಜಾತಿ ಪ್ರಮಾಣ ಪತ್ರ ಕೊಡುವುದು ಮತ್ತು ಇವರಿಗೆ ಈ ದಿಶೆಯಲ್ಲಿ ಯಾವ ಅನಾನುಕೂಲತೆಗಳು ಅವರಿಗೆ ಉಂಟಾಗಬಾರದು.

ಸಹಿ:-
(ಬಿ.ಎಲ್.ನಾಗರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

:ನಕಲು:

ಸಂ.ಜಿಸಕಲ:ಬಿ-9:ಜಾತಿಪತ್ರ:ಸಿಆರ್-47:88-89 ದಿನಾಂಕ:21-10-88.

ಪ್ರತಿಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.